ಪ್ರಬಂಧ

# ವಾಯು ಜೀವೋತ್ತಮ



ಜಿ.ಎನ್. ರಂಗನಾಥ ರಾವ್

ಕಲೆ: ವಿಶ್ವನಾಥ್ ಎ.ಎಸ್.

ಹರಿ ಸರ್ವೋತ್ತಮ
ವಾಯು ಜೀವೋತ್ತಮ

ಇದು ನಮ್ಮ ಮಧ್ವ ಮುನಿಗಳ ನುಡಿಮುತ್ತು. ಅವರು ಶಿಷ್ಯರಿಗೆ ಬೋಧಿಸಿರುವ ಜೀವನಸೂತ್ರ. ಹಳ್ಳಿಗಳಲ್ಲಿ ಮನೆಯ ಬಾಗಿಲ ಮೇಲೆ 'ನಾಳೆ ಬಾ' ಎಂದು ಬರೆದಿರುವುದಿಲ್ಲವೆ, ಹಾಗೆಯೇ ಯಾವುದೇ ಊರಿನ ಅಗ್ರಹಾರದ ಮನೆಯ ಬಾಗಿಲುಗಳ ಮೇಲೆ-

ಹರಿ ಸರ್ವೋತ್ತಮ
ವಾಯು ಜೀವೋತ್ತಮ

ಎನ್ನುವ ಸ್ಟಿಕ್ಕರ್ ಅಂಟಿಸಿರುವುದನ್ನು ನಾವು ಕಾಣಬಹುದು. ಬೇರೆ ಊರು-ಪಟ್ಟಣಗಳಲ್ಲಿರುವಂತೆ ಬೆಂಗಳೂರು ಮಹಾನಗರದಲ್ಲಿ ಅಗ್ರಹಾರ, ಬ್ರಾಹ್ಮಣರ ಬೀದಿ ಇಲ್ಲ. ಹಾಗೆಂದು ಬೆಂಗಳೂರಿಗರು ಸೆಕ್ಯುಲರ್ ಎಂದು ಕೊಚ್ಚಿಕೊಳ್ಳುವಂತಿಲ್ಲ. ಏಕೆಂದರೆ ಬೆಂಗಳೂರಿನ ಹಳೆಯ ಬಡಾವಣೆಗಳಲ್ಲೊಂದಾದ ಚಾಮರಾಜಪೇಟೆಯಲ್ಲಿ ಅಗ್ರಹಾರವಿದೆ. ಈ ಅಗ್ರಹಾರವಲ್ಲದೆ ಹೊಸ ಬಡಾವಣೆಗಳ ಕೆಲವು ಮನೆಗಳ ಬಾಗಿಲುಗಳ ಮೇಲೂ 'ಹರಿ ಸರ್ವೋತ್ತಮ / ವಾಯು ಜೀವೋತ್ತಮ' ಸ್ಟಿಕ್ಕರ್ ಅಂಟಿಸಿರುವುದನ್ನು ಕಾಣಬಹುದು. ಈ ಸ್ಟಿಕರ್‌ನಿಂದ ಅದು ಮಾಧ್ವ ಬ್ರಾಹ್ಮಣರ ಮನೆ ಎಂದು ಖಚಿತವಾಗಿ ಗುರುತಿಸಬಹುದು. ನಾನು ನನ್ನ ತಂಗಿಯರಿಗೆ ವರಾನ್ವೇಷಣೆ ಮಾಡುತ್ತಿದ್ದಾಗ ಈ ಸ್ಟಿಕ್ಕರ್ ಅಂಟಿಸಿದ ಮನೆ ಬಾಗಿಲು ಬಡಿದು, 'ನನ್ನ ತಂಗಿಗೊಂದು ಗಂಡು ಕೊಡುವಿರಾ' ಎಂದು ಕೇಳಿದ್ದುಂಟು.

'ಹರಿ ಸರ್ವೋತ್ತಮ / ವಾಯು ಜೀವೋತ್ತಮ' – ಈ ಎರಡೂ ಸ್ವತಃ ನನಗೆ ಅನುಭವಕ್ಕೆ ಬಂದಿವೆ. ನಾನು ಸರ್ವೀಸ್‌ನಲ್ಲಿದ್ದಾಗ ಎರಡು ದಶಕಗಳಿಗೂ ಹೆಚ್ಚುಕಾಲ ಶ್ರೀ ಹರಿಸರ್ವೋತ್ತಮ ಎಂಬ ನಾಮಧೇಯದ ಬಾಸ್ ಕೈಕೆಳಗೆ ಕೆಲಸ ಮಾಡಿದವನು. ನಾನಷ್ಟೇ ಅಲ್ಲ, ಅಲ್ಲಿ ಕೆಲಸದಲ್ಲಿ ಒಂದಲ್ಲ ಒಂದು ತಪ್ಪು ಮಾಡಿ ಕಷ್ಟಕ್ಕೆ ಸಿಕ್ಕಿಕೊಂಡಾಗ ನಾವು ಶ್ರೀ ಹರಿಸರ್ವೋತ್ತಮರ ಮೊರೆ ಹೋಗುತ್ತಿದ್ದೆವು. ಅವರು ನಮ್ಮನ್ನು ಪಾರುಮಾಡುತ್ತಿದ್ದರು. ಹೀಗಾಗಿ, 'ಹರಿ ಸರ್ವೋತ್ತಮ' ಎಂಬುದನ್ನ ನಾನು ನೂರಕ್ಕೆ ನೂರು ಒಪ್ಪುತ್ತೇನೆ. ಆದರೆ, 'ವಾಯು ಜೀವೋತ್ತಮ' ಎಂಬುದನ್ನು ಕೇಳಿದಾಗ ಮುಖ ಗಂಟಿಕ್ಕುವಂತೆ ಆಗುತ್ತದೆ. ಆದರೆ, ವಾಯು ಪ್ರಾಣವಾಯುವೂ ಪ್ರಾಣ ದೇವರೂ ಆದುದರಿಂದ ಅದರೊಂದಿಗೆ ಹೊಂದಿಕೊಂಡು ಹೋಗಬೇಕಾದ್ದು ಅನಿವಾರ್ಯ.

ಜೀವೋತ್ತಮನಾದ ವಾಯು ದೇವರು ಮಾನವನ ದೇಹದಲ್ಲಿ ಎಲ್ಲೆಲ್ಲೂ ಆಪಾದಮಸ್ತಕ ಸಂಚರಿಸುತ್ತಿರುತ್ತಾರೆ. ಒಮ್ಮೊಮ್ಮೆ ಡಿಕ್ಕಿ ಹೊಡೆಯುವ ರಭಸದ ಬಿ.ಟಿ.ಎಸ್. ಬಸ್ಸಿನಂತೆಯೂ, ಕೆಲವೊಮ್ಮೆ, ಸಾಧಾರಣವಾಗಿ ಸುಳಿಗಾಳಿಯಂತೆ. ಸ್ವತಃ ಇದು ನನಗೆ ಅನುಭವಕ್ಕೆ ಬಂದಿದೆ. ಇದಕ್ಕೆ ಕೆಲವೊಂದು ಉದಾಹರಣೆ ಕೊಡಬಲ್ಲೆ. ಅರವತ್ತರ ನಂತರ ಕಾಲು ನೋವು, ಮಂಡಿ ನೋವು, ಎದೆ ನೋವು, ಕೀಲುಗಳ ನೋವು, ಕೈಗಳ ಗಿಣ್ಣುಗಳ ನೋವು ಮೊದಲಾದ ತರಹೇವಾರಿ ನೋವುಗಳು ಹಳೆಯ ಮಿತ್ರನಂತೆ ಬಂದು